ಕೊಡಲಾಗುತ್ತದೆ. ಈ ಯೋಜನೆ ಬಂದಾಗ ಮಾನ್ಯ ಸದಸ್ಯರು ಇದನ್ನು ನನ್ನ ಗಮನಕ್ಕೆ ತಂದರೆ 1997-98ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಿಕ್ಕೆ ನಾನು ಶಿಫಾರಸ್ಸು ಮಾಡುತ್ತೇನೆ.

ವಿಷಯ:- ತುಮಕೂರು ಜಿಲ್ಲೆಯಲ್ಲಿನ ಅನುದಾನರಹಿತ ಕನ್ನಡ ಮಾಧ್ಯಮದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು.

12(322)

ಶ್ರೀ ಆರ್. ನಾರಾಯಣ (ಬೆಳ್ಳಾವಿ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ತುಮಕೂರು ಜಿಲ್ಲೆಯಲ್ಲಿ ಕನ್ನಡ ಮಾಧ್ಯಮದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಶಾಶ್ವತ ಅನುದಾನ ರಹಿತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅವುಗಳಲ್ಲಿ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇನ್ನಿತರ ವರ್ಗಗಳಿಂದ ನಡೆಸಲ್ಪಡುತ್ತಿವೆ;

ಇ) ಗ್ರಾಮಾಂತರ ಪ್ರದೇಶಗಳಲ್ಲಿರುವ ಇಂತಹ ಸಂಸ್ಥೆಗಳಿಗೆ ವಿಶೇಷ ನಿಯಮಾವಳಿಯಡಿಯಲ್ಲಿ ಅನುದಾನ ನೀಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಕೆಲವು ಶಾಲೆಗಳು ಶಾಶ್ವತ ಅನುದಾನ ರಹಿತವಾಗಿ ನಡೆಯುತ್ತಿವೆ.

ಆ)

	ಪ.ಜಾ. ಪ.ಪಂ.	ಇತರೆ	ಒಟ್ಟು
ಪ್ರಾಥಮಿಕ	011	58	069
ಪ್ರೌಢ	116	49	165

ಇ) ಶಾಶ್ವತ ಅನುದಾನರಹಿತ ಶಾಲೆಗಳಿಗೆ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ನಾರಾಯಣ:- ಮಾನ್ಯ ಸಭಾಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ, ಎಸ್‌ಸಿ/ಎಸ್‌ಟಿ ಮತ್ತಿರ ಮ್ಯಾನೇಜ್‌ಮೆಂಟ್‌ನಲ್ಲಿ ಸುಮಾರು 80 ಪರ್‌ಸೆಂಟ್‌ನಷ್ಟು ಪ್ರೌಢ ಶಾಲೆಗಳು ನಡೆಯುತ್ತಿವೆ. ಶಾಶ್ವತ ಅನುದಾನ ರಹಿತ ಎನ್ನುವ ಕಂಡೀಷನ್ ಮೇಲೆ ಅವರುಗಳು ಪ್ರೌಢ ಶಾಲೆಗಳನ್ನು ನಡೆಸುವುದಕ್ಕೆ ಸರ್ಕಾರ ಪರ್ಮಿಷನ್ ಕೊಟ್ಟಿದೆ. ಬಹುಶಃ ಮುಂದಿನ ವರ್ಷಗಳಲ್ಲಿ ಅನುದಾನ ಸಿಗಬಹುದೆಂಬ ಹಿನ್ನೆಲೆಯಲ್ಲಿ ಅವರು ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಆದರಲ್ಲೂ ಎಸ್‌ಸಿ/ಎಸ್‌ಟಿ ಮ್ಯಾನೇಜ್‌ಮೆಂಟ್‌ನವರು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಡವನ್ನು ಬಾಡಿಗೆ ಪಡೆದು ಶಾಲೆಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರುಗಳು ಅವರ ಜೀವನ ಪರ್ಯಂತ ಸಂಬಳ ಇಲ್ಲದೆ ಮಕ್ಕಳಿಗೆ ಪಾಠ ಮಾಡುವುದನ್ನು ಸರ್ಕಾರ ನಿರೀಕ್ಷಣೆ ಮಾಡುವುದು ಸರಿಯೇ? ಎಸ್‌ಸಿ/ಎಸ್‌ಟಿ ಮತ್ತು ಇತರೆ ಮ್ಯಾನೇಜ್‌ಮೆಂಟ್‌ನವರು ಅನುದಾನ

ರಹಿತವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ನಡೆಸುವುದಕ್ಕೆ ಸಾಧ್ಯವೇ ಎನ್ನುವ ಕಲ್ಪನೆಯಾದರೂ ಸರ್ಕಾರಕ್ಕೆ ಇದೆಯೇ ಎಂಬುದು ಒಂದು ಪ್ರಶ್ನೆ. ಕೆಲವರು ಶಾಲೆಗಳನ್ನು ಪ್ರಾರಂಭ ಮಾಡಿ ಒಂದೆರೆಡು ವರ್ಷಗಳಾದ ಮೇಲೆ ಮುಚ್ಚಿಬಿಟ್ಟಿದ್ದಾರೆ.

ಅಧ್ಯಕ್ಷರು:- ಕ್ವೊಶ್ಚನ್ ಬ್ರೀಫ್ ಆಗಿರಬೇಕು. ಈಗ ತಾವು ಸ್ಪೆಷಲ್ ಕನ್ಸಿಡರೇಷನ್ ಕೇಳುತ್ತಿದ್ದೀರಿ.

ಶ್ರೀ ಆರ್. ನಾರಾಯಣ:- ಗ್ರಾಂಟ್‌ಕೊಡದಿದ್ದರೆ ಅವರು ಯಾವ ರೀತಿ ಶಾಲೆಗಳನ್ನು ನಡೆಸುವುದು?

ಅಧ್ಯಕ್ಷರು:- ಶಾಶ್ವತ ಅನುದಾನ ರಹಿತ ಎನ್ನುವ ಕಂಡೀಷನ್ ಮೇಲೆ ಶಾಲೆಗಳನ್ನು ನಡೆಸುತ್ತೇವೆಂದು ಅವರು ಬರೆದುಕೊಟ್ಟ ನಂತರವೇ ಸರ್ಕಾರ ಪರ್ಮಿಷನ್ ಕೊಟ್ಟಿರುವುದು. ಅನುದಾನ ಬೇಡ ಎಂದು ಅವರು ಬರೆದುಕೊಟ್ಟು ಪರ್ಮಿಷನ್ ತೆಗೆದುಕೊಂಡಿದ್ದಾರೆ. ಈಗ ಅನುದಾನ ಬೇಕು ಎಂದು ತಾವು ಕೇಳುತ್ತಿದ್ದೀರಿ. ಇದಕ್ಕೆ ಸ್ಪೆಷಲ್ ಕನ್ಸಿಡರೇಷನ್ ಏನಾದರೂ ಇದೆಯೆ ಎಂದು ಸರ್ಕಾರವನ್ನು ಕೇಳೋಣ.

ಶ್ರೀ ಆರ್. ನಾರಾಯಣ:- ಅನುದಾನ ಇಲ್ಲದೆ ಶಾಲೆಗಳನ್ನು ನಡೆಸುವುದಕ್ಕೆ ಸಾಧ್ಯವೇ ಎಂಬುದನ್ನು ಮಾನ್ಯ ಮಂತ್ರಿಗಳು ಮನವರಿಕೆ ಮಾಡಿಕೊಳ್ಳಬೇಕು.

ಅಧ್ಯಕ್ಷರು:- ನಮಗೆ ಅನುದಾನ ಬೇಡ ಎಂದು ಅವರು ತಾನೇ ಬರೆದು ಕೊಟ್ಟಿದ್ದುದು.

SRI R. NARAYAN:- Can we expect them to run/the school wihtout grants?

MR. SPEAKER:- Who asked them to start? They themselves gave in writing. As legislatures, we are expected to be in possession of all the information. Let me hear the Hon'ble Minister.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಶಾಶ್ವತ ಅನುದಾನ ರಹಿತವಾಗಿ ನಾವು ಶಾಲೆಗಳನ್ನು ನಡೆಸುತ್ತೇವೆಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿರತಕ್ಕಂಥ ಮ್ಯಾನೇಜ್‌ಮೆಂಟ್‌ನವರು ಬರೆದುಕೊಟ್ಟ ಆಧಾರದ ಮೇಲೆ ದಿನಾಂಕ 1-6-1987 ರಿಂದ ಪರ್ಮಿಷನ್ ಕೊಟ್ಟಿದ್ದೇವೆ. ಇದಕ್ಕೆ ಅರ್ಥ ಏನೆಂದು ನಾನು ವ್ಯಾಖ್ಯಾನ ಮಾಡುವ ಅವಶ್ಯಕತೆ ಇಲ್ಲ. ಶಾಶ್ವತ ಅನುದಾನ ರಹಿತದ ಆಧಾರದ ಮೇಲೆ ನಡೆಸುತ್ತೇವೆಂದು ಅವರು ಬರೆದುಕೊಡದೆ ಇದ್ದು ಅಂಥಹ ಶಾಲೆಗಳಿಗೆ ನಾವು ಮಂಜೂರು ಮಾಡಿದ್ದರೆ ಈ ಪ್ರಶ್ನೆ ಉದ್ಭವಿಸುತ್ತದೆ. ಶಾಶ್ವತ ಅನುಧಾನ ರಹಿತ ಎಂದು 10 ರೂಪಾಯಿ ಸ್ಟ್ಯಾಂಪ್ ಪೇಪರ್ ಮೇಲೆ ಬರೆದು ಕೊಟ್ಟಿದ್ದಾರೆ. ಇದಕ್ಕೆ ಕನ್ಸಿಡರೇಷನ್ ಮಾಡಿದರೆ ವರ್ಷ ವರ್ಷ 200 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಖರ್ಚು ಬರುತ್ತದೆ. ಆದರೂ ಅನೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಹಾಗೂ ಬ್ಯಾಕ್‌ವರ್ಡ್ ಕ್ಲಾಸ್ ಮ್ಯಾನೇಜ್‌ಮೆಂಟ್‌ನವರು ಬಂದು ನಾವು ಶಾಲೆಗಳನ್ನು

ನಡೆಸುತ್ತಿದ್ದೇವೆ, ಅನುದಾನ ಪಡೆಯಲು ಏನಾದರೂ ಪರಿಹಾರ ಇದೆಯೇ ಎಂದು ಕೇಳಿದ ಆಧಾರದ ಮೇಲೆ ಇತ್ತೀಚೆಗೆ ಇದರ ಬಗ್ಗೆ ವಿಚಾರ ಮಾಡಲು ಸಂಪುಟದ ಒಂದು ಉಪ ಸಮಿತಿಯನ್ನು ಮಾಡಲಾಗಿದೆ. ಈ ಉಪಸಮಿತಿಯು ಈಗಾಗಲೇ ಎರಡು ಮೀಟಿಂಗ್‌ಗಳನ್ನು ಮಾಡಿದೆ. ಶಾಶ್ವತ ಅನುಧಾನ ರಹಿತವಾಗಿ ಶಾಲೆಗಳನ್ನು ನಡೆಸುತ್ತೇವೆಂದು ಬರೆದುಕೊಟ್ಟು ಮತ್ತೆ ಕೇಳುವುದು ಸರಿಯಾದುದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಶಾಶ್ವತ ಅನುದಾನ ರಹಿತದ ಆಧಾರದ ಮೇಲೆ ನಾವು ಶಾಲೆಗಳನ್ನು ನಡೆಸಿಕೊಂಡು ಹೋಗುತ್ತೇವೆಂದು ಅವರು ಹೇಳಿದ ಮೇಲೆ ಪುನಃ ಅದನ್ನು ಕನ್ಸಿಡರ್ ಮಾಡುವುದಕ್ಕೆ ಸಂಪುಟದ ಉಪ ಸಮಿತಿ ಮಾಡಿರುವುದು ಏಕೆ? ಪರಿಶೀಲನೆ ಮಾಡುವುದು ಏಕೆ? ನೀವಾಗಿ ತುಟಿಗೆ ತುಪ್ಪ ಹಚ್ಚಿದ ಹಾಗೆ ಅಲ್ಲವೇ?

ಶ್ರೀ ಹೆಚ್.ಸಿ. ಬಾಲಕೃಷ್ಣ:- ಸನ್ಮಾನ್ಯ ಅಧ್ಯಕ್ಷರೆ, 10 ರೂಪಾಯಿ ಛಾಪಾ ಕಾಗದದ ಮೇಲೆ ಬರೆದುಕೊಟ್ಟು ಅನುದಾನ ರಹಿತ ಶಾಲೆಗಳು ಪ್ರಾರಂಭವಾಗಿರಬಹುದು. ಹಿಂದಿನ ಜಿಲ್ಲಾ ಪರಿಷತ್ ಇದ್ದಂಥ ಸಂದರ್ಭದಲ್ಲಿ 7 ವರ್ಷಗಳ ಕಾಲ ಅನುದಾನ ರಹಿತ ನಂತರ ಅನುದಾನ ಕೊಡುತ್ತೇವೆ ಎಂದು ಹೇಳಿ ಕೆಲವು ಶಾಲೆಗಳಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಆದರೆ, ಆ ಬಗ್ಗೆ ಸರ್ಕಾರ ಗಮನಹರಿಸುತ್ತಿಲ್ಲ. ಆದರೆ, ಆ ಶಾಲೆಗಳವರಿಂದಲೂ ಬಲವಂತದಿಂದ ಅನುದಾನ ರಹಿತದ ಮೇಲೆ ಪರ್ಮಿಷನ್ ತೆಗೆದುಕೊಂಡಿದ್ದೇವೆಂದು ಬರೆದುಕೊಡಿ ಎಂದು ಸರ್ಕಾರ ಕೇಳುತ್ತಿದೆ ಎಂದು ಆ ಸಂಸ್ಥೆಗಳವರು ಹೇಳುತ್ತಿದ್ದಾರೆ. ಆ ಸಂಸ್ಥೆಗಳಿಗಾದರೂ ಅನುಧಾನ ಕೊಡಬೇಕೆಂದು ತಮ್ಮ ಮೂಲಕ ಮಂತ್ರಿಗಳಿಗೆ ಕೇಳುತ್ತಿದ್ದೇನೆ.

ಶ್ರೀ ಆರ್. ನಾರಾಯಣ:- ಪರಿಶಿಷ್ಟ ಜಾತಿಯ ಒಂದು ಮ್ಯಾನೇಜ್‌ಮೆಂಟ್ ಶಾಶ್ವತ ಅನುದಾನ ಇಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಹೈಸ್ಕೂಲುಗಳನ್ನು ನಡೆಸುವುದಕ್ಕೆ ಸಾಧ್ಯವೇ? ಅಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಯರುಗಳು ಅವರ ಜೀವನ ಪರ್ಯಂತ ಸಂಬಳ ಇಲ್ಲದೆ ಕೆಲಸ ಮಾಡತಕ್ಕಂಥಾದ್ದು ಸಾಧ್ಯವೇ ಎನ್ನುವುದು ಪ್ರಶ್ನೆಯಾಗಿದೆ. ಸರ್ಕಾರಕ್ಕೆ ಸಾಮಾಜಿಕ ಜವಾಬ್ದಾರಿ ಇಲ್ಲವೆ? ಖಾಸಗಿಯವರು ಶಾಲೆಗಳನ್ನು ತೆರೆಯುವುದಕ್ಕೆ ಮುಂದೆ ಬರದೆ ಇದ್ದರೆ ಆ ಜಾಗದಲ್ಲಿ ಸರ್ಕಾರವೇ ಶಾಲೆಗಳನ್ನು ತೆರೆಯುವ ಜವಾಬ್ದಾರಿ ಇರಲಿಲ್ಲವೇ? ಇದು ಗ್ರಾಮಾಂತರ ಸರ್ಕಾರ, ರೈತರ ಸರ್ಕಾರ ಎಂದು ಹೇಳಿ ಗ್ರಾಮಾಂತರ ಪ್ರದೇಶದ ರೈತರ ಮಕ್ಕಳಿಗೆ ಪ್ರೌಢ ಶಿಕ್ಷಣವನ್ನು ಕೊಡತಕ್ಕಂತ ಸಾಮರ್ಥ್ಯ ಈ ಸರ್ಕಾರಕ್ಕೆ ಇಲ್ಲ. ಖಾಸಗಿಯವರು ಶಾಲೆಗಳನ್ನು ತೆರೆಯುವುದಕ್ಕೆ ಮುಂದೆ ಬರದೇ ಇದ್ದರೆ ಆ ಜಾಗದಲ್ಲಿ ಸರ್ಕಾರವೇ ಶಾಲೆಗಳನ್ನು ತೆರೆಯಬೇಕಾಗಿತ್ತಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮೊದಲಿನಿಂದಲೂ ಗ್ರಾಂಟ್ ಕೊಡಬೇಕೆಂದು ನನ್ನ ಕಾಲದಲ್ಲಿ ಮಾಡಿತ್ತು. ಆದರೆ 3-4 ವರ್ಷಗಳ ಹಿಂದೆ ಎಲ್ಲರೂ ಹೈಸ್ಕೂಲ್ ಕೇಳಿದ ಕಾರಣ ಅಂಥವರನ್ನು ಸಮಾಧಾನ ಮಾಡುವುದಕ್ಕೋಸ್ಕರವಾಗಿ ಅಂಥವರಿಗೆ ಸ್ಕೂಲ್ ಕೊಡಬಹುದೆಂದು ಮಾಡಿಕೊಟ್ಟುಕೊಂಡು ಬಂದರು. ಆದರೆ ಒತ್ತಾಯಪೂರ್ವಕವಾಗಿ ಕೆಲವರು ತೆಗೆದು ಕೊಂಡಿರಬೇಕು. ನೀವು ಕೂಡ ಎಲ್ಲಿ ಅವಶ್ಯಕತೆ ಇದೆ ಎಂದು ನೋಡಿಕೊಟ್ಟಿದ್ದೀರಿ. ಅಂಥ

ಕಡೆಗಳಲ್ಲೆಲ್ಲಾ ಮಕ್ಕಳು ಓದುತ್ತಾ ಇದ್ದಾರೆ. ಈ ಕುರಿತಾಗಿ ಅಭ್ಯಾಸ ಮಾಡಲು ಆಗಿನ ಗುಲ್ಬರ್ಗಾ ವಿಶ್ವವಿದ್ಯಾಲಯ ಉಪ-ಕುಲಪತಿಗಳಾದ ಡಾ: ನಾಗರಾಜ್ ಸಮಿತಿಯನ್ನು ಮಾಡಿದ್ದರು. ಯಾವ ಯಾವ ಸ್ಕೂಲ್‌ಗಳು ಸರಿಯಾಗಿ ನಡೆಯುತ್ತಾ ಇವೆ, ಅಲ್ಲಿ ಸಿಬ್ಬಂಧಿವರ್ಗ ಇತ್ಯಾದಿ ವ್ಯವಸ್ಥೆಗಳು ಸರಿಯಾಗಿ ಇದೆ. ಅಂಥ ಶಾಲೆಗಳವರು 3-4 ವರ್ಷಗಳಿಂದ ಸರಿಯಾಗಿ ನಡೆಸಿಕೊಂಡು ಬಂದಿದ್ದರೆ, ಅಲ್ಲಿ ಮಕ್ಕಳು ಸೂಕ್ತ ಪ್ರಮಾಣದಲ್ಲಿ ಅಭ್ಯಸಿಸುತ್ತಿದ್ದರೆ, ಅಂಥ ಸ್ಕೂಲ್‌ಗಳನ್ನು ಪರಿಶೀಲಿಸಿ ಗ್ರ್ಯಾಂಟ್‌ನ್ನುಕೊಡಬೇಕೆಂದು ಒಂದು ಸರಕಾರಿ ಆದೇಶವನ್ನು ಹೊರಡಿಸಿದ್ದರು. ಆದ್ದರಿಂದ ಎಲ್ಲಿ ಶಾಲೆಯ ಅವಶ್ಯಕತೆ ಇದೆ ಅಲ್ಲಿ ಕೊಡಬೇಕು. ಇಲ್ಲಿಯವರೆಗೆ ಸ್ಕೂಲ್‌ಗಳನ್ನು ನಡೆಸಿಕೊಂಡು ಬಂದವುಗಳನ್ನು ರೆಗ್ಯುಲರೈಸ್ ಮಾಡಬೇಕು. ರಾಜ್ಯದಲ್ಲಿನ ಎಷ್ಟೋ ಅನ್‌ಅಥಾರೈಸ್ಡ್ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳಿಗೆ ಮೊದಲು ಪರ್ಮಿಷನ್ ಇಲ್ಲದೆ ಇದ್ದರೂ ಕೂಡ ಆಮೇಲೆ ನೀವೇ ಮಾನ್ಯತೆಯನ್ನು ಕೊಟ್ಟಿದ್ದೀರಿ. ಕೊಡಬಾರದೆಂದು ಸಚಿವಸಂಪುಟದ ಡಿಸಿಷನ್ ಇದ್ದರೂ ಕೂಡ ಮಾನ್ಯತೆಯನ್ನು ಕೊಟ್ಟಿದ್ದೀರಿ. ಈ ಕುರಿತಾಗಿ ಹೈಕೋರ್ಟ್ ಅಷ್ಟೇ ಅಲ್ಲ, ಬೇರೆ ಹೈಕೋರ್ಟ್ ಆರ್ಡರ್‌ಗಳು ಬೇಕಾದಷ್ಟು ಇದ್ದರೂ ಎಲ್ಲವನ್ನೂ ನೀವು ಇಂಪ್ಲಿಮೆಂಟ್ ಮಾಡಿಲ್ಲ. ನೀವು ಮಾಡಬೇಕೆಂದಿದ್ದರೆ ಪರಿಶೀಲನೆ ಮಾಡಬಹುದು. ಆ ಶಾಲೆಗಳನ್ನು ಪ್ರಾರಂಭ ಮಾಡುವಾಗ ಅವರು ಬರೆದುಕೊಟ್ಟಿದ್ದಾರೆಂದು ಹೇಳಿ ಈಗ ಬಿಡುವುದು ಸರಿಯಲ್ಲ. ಮಾನ್ಯತೆಯನ್ನು ಕೊಡುವ ಅವಶ್ಯಕತೆ ಇದ್ದಲ್ಲಿ ಬಂದವರಿಗೆ ಕೊಡಬೇಕು. ಒಂದು ವೇಳೆ ಸರಿಯಾಗಿ ನಡೆಸದೇ ಇರುವ ಸಂಸ್ಥೆಗಳಿಗೆ ಅಡ್ಮಿನಿಸ್ಟ್ರೇಟರ್ ಹಾಕಿ ಟೇಕ್ ಓವರ್ ಮಾಡಿ...

ಶ್ರೀ ಹೆಚ್.ಜಿ. ಗೋವಿಂದೇಗೌಡ:- 1-6-1987 ರಿಂದ ಇತ್ತೀಚೆಗೆ ಯಾವುದೇ ಶಾಶ್ವತ ಅನುದಾನ ರಹಿತ ಶಾಲೆಗಳಿಗೆ ಅನುದಾನವನ್ನು ಕೊಟ್ಟಿಲ್ಲ. ಆದರೂ ಕೆಲವು ಜನರು ಎಸ್‌ಸಿ/ಎಸ್‌ಟಿ ವರ್ಗದವರು ತಮ್ಮ ಸಮಸ್ಯೆಗಳನ್ನು ನಮ್ಮ ಮುಂದೆ ಹೇಳಿದಾಗ ಸಚಿವ ಸಂಪುಟದ ಒಂದು ಉಪ-ಸಮಿತಿಯನ್ನು ಈ ಬಗ್ಗೆ ಪರಿಶೀಲಿಸಲು ಮಾಡಿದ್ದೇವೆ. ಎಲ್ಲರಿಗೂ ಸರಕಾರದವರು ಅನುದಾನವನ್ನು ಕೊಡುವುದಕ್ಕೆ ಆಗುವುದಿಲ್ಲ. ಎಲ್ಲಿ ನಿಜವಾಗಿಯೂ ಇಂಥ ಸಂಸ್ಥೆಗಳವರು ಕಷ್ಟದಲ್ಲಿದ್ದಾರೆ ಎಂಬುದನ್ನು ನೋಡಿ ಉಪ-ಸಮಿತಿಯವರು ಸೂಕ್ತ ರೀತಿಯಲ್ಲಿ ಪರಿಶೀಲಿಸುತ್ತಾರೆ.

ಶ್ರೀ ಹೆಚ್.ಜಿ. ಬಾಲಕೃಷ್ಣ:- ಹಿಂದೆ ಜಿಲ್ಲಾಪಂಚಾಯತ್‌ನವರು ಕೊಟ್ಟಿರತಕ್ಕಂಥ ಶಾಲೆಗಳಿಗೆ ಅನುದಾನವನ್ನು ಕೊಡುತ್ತೀರೋ? ಅದನ್ನು ಸರಕಾರದವರು ಅನುದಾನಕ್ಕೆ ಪರಿಗಣಿಸುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲಾ ಪಂಚಾಯತ್‌ನವರು 1987-88ರಲ್ಲಿ 26 ಹೈಸ್ಕೂಲ್‌ಗಳಿಗೆ ಅನುಮತಿ ಕೊಟ್ಟರು. ಜಿಲ್ಲಾಪಂಚಾಯತ್‌ನವರು ತಮ್ಮ ಅನುದಾನದಲ್ಲಿ ಅಂಥ ಶಾಲೆಗಳಿಗೆ ಅನುದಾನವನ್ನು ಕೊಡುವುದಕ್ಕೆ ತಯಾರಾಗಿದ್ದರೂ ಕೂಡ ತಾವುಗಳು ಅವರಿಗೆ ಪರ್ಮಿಷನ್ ಕೊಡುತ್ತೀರೋ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- 1-6-1987ರ ಹಿಂದೆ ಅವರು ಅನುದಾನ ಕೊಡುತ್ತೇವೆಂದು ಹೇಳಿ 3 ಪರ್‌ಸೆಂಟ್ ರಿಸರವೇಷನ್ ಇಟ್ಟು ಮಾಡಿದರೆ ಅದಕ್ಕೆ ಆದ್ಯತೆಯನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಎಸ್.ಆರ್. ಅಂಬಡಗಟ್ಟಿ:- ಮಕ್ಕಳ ಶಿಕ್ಷಣ ಸರಿಯಾಗಿ ನಡೆಯುತ್ತಾ ಇದ್ದರೂ, ಕೆಲವು ಖಾಸಗಿ ಸಂಸ್ಥೆಗಳವರು ಶಾಲೆಯನ್ನು ಒಂದೆರಡು ವರ್ಷಗಳ ಕಾಲ ನಡೆಸಿ ಬಿಟ್ಟುಬಿಟ್ಟರೆ ಏನು ಮಾಡುತ್ತೀರಿ? ಸರಕಾರ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ?

ಅಧ್ಯಕ್ಷರು:- ಸಚಿವ ಸಂಪುಟದ ಉಪ-ಸಮಿತಿಯು ಇದೆ. ಅಲ್ಲಿ ಈ ವಿಚಾರಗಳನ್ನು ತೀರ್ಮಾನ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಎಸ್‌ಸಿ/ಎಸ್‌ಟಿ ಜನರ ಅಭಿವೃದ್ಧಿಗೋಸ್ಕರವಾಗಿ ಇಂಥ ಸಮಸ್ಯೆಗಳು ಹುಟ್ಟಿ ಅಂಥವರು ಶಾಲೆಗಳನ್ನು ನಡೆಸುತ್ತಾ ಇದ್ದರೆ ಅವರಿಗೆ ಅನುದಾನವನ್ನು ಕೊಡಬೇಕು. ಆದರೆ ವಾಸ್ತವವಾಗಿ ಅವರ ಹೆಸರಿನಲ್ಲಿ ಬೇರೆಯವರು ಶಾಲೆಗಳನ್ನು ನಡೆಸುತ್ತಾ ಇದ್ದಾರೆ. ಉದಾಹರಣೆಗೆ ಗುಲ್ಬರ್ಗದವರು ಸಾಗರಕ್ಕೆ ಬಂದು ಒಂದು ಸಂಸ್ಥೆಯನ್ನು ನಡೆಸುತ್ತಾರೆ ಅಂದರೆ ಹೇಳಿಕೊಳ್ಳಲು ನಾಚಿಕೆಯಾಗುತ್ತದೆ.

ಶ್ರೀ ವಸಂತ ವಿ. ಸಾಲಿಯಾನ್:- ಜಿಲ್ಲಾ ಪಂಚಾಯತ್‌ಗಳವರು ಕರ್ನಾಟಕ ರಾಜ್ಯದಲ್ಲಿ '06 ಹೈಸ್ಕೂಲ್‌ಗಳಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಅವುಗಳು ಅನುದಾನ ಸಹಿತ ಶಾಲೆಗಳು ಎಂದು ಆರ್ಡರ್ ಇದೆ. ಆದರೆ ಅವರಿಗೆ ಇನ್ನೂ ಯಾವ ಅನುದಾನವೂ ಸಿಕ್ಕಿಲ್ಲ. ನಮ್ಮ ಕಳಕಳಿ ಇಷ್ಟೆ.. ಅಂಥವರು 9 ವರ್ಷಗಳಿಂದ ಶಾಲೆಗಳನ್ನು ನಡೆಸುತ್ತಾ ಇದ್ದಾರೆ. ಆದರೆ ಅವರಿಗೆ ಸಿಬ್ಬಂದಿಗಳಿಗೆ ವೇತನ ಕೊಡಲು ಹಣವಿಲ್ಲ ಎಂದು ಹೇಳುತ್ತಾ ಇದ್ದಾರೆ. ಅಂಥ ಶಾಲೆಗಳಿಗೆ ಅನುದಾನವನ್ನು ಕೊಡಬೇಕು. ಏತಕ್ಕೆಂದರೆ ಕೆಲವು ಹಳ್ಳಿಗಳಲ್ಲಿ ಒಂದು ಹೈಸ್ಕೂಲ್ ಕೂಡ ಇಲ್ಲ.

ಶ್ರೀ ಎಸ್.ಆರ್. ಅಂಬಡಗಟ್ಟಿ:- ಆಗ ಛಾಪಾ ಕಾಗದದ ಮೇಲೆ ಶಾಶ್ವತ ಅನುದಾನ ರಹಿತ ಎಂದು ಬರೆದು ತೆಗೆದುಕೊಂಡಿದ್ದಾರೆ....

MR. SPEAKER:- I am sorry, I do not went to disoblige you. We have gone too far...

ವಿಷಯ:- ಧಾರವಾಡ ಜಿಲ್ಲೆಯಲ್ಲಿ 1995-1996 ಕೊರೆದಿರುವ ಕೊಳವೆ ಬಾವಿಗಳು.

14(213)

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ಸಿಟಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ಕೊರೆದಿರುವ ಕೊಳವೆಬಾವಿಗಳೆಷ್ಟು? ಅವುಗಳಿಗೆ ಮಾಡಿರುವ ಖರ್ಚೆಷ್ಟು? ಅತೀ ಹೆಚ್ಚಿಗೆ ಮತ್ತು ಅತೀ ಕಡಿಮೆ ಖರ್ಚು ಮಾಡಿದ ಜಿಲ್ಲೆಗಳಾವುವು;

ಆ) ಧಾರವಾಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ಸರ್ಕಾರ ಕೊರೆದ ಕೊಳವೆ ಬಾವಿಗಳಲ್ಲಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್‌ಸೆಟ್‌ಗಳನ್ನು ಜೋಡಿಸಲಾಗಿದೆ ಹಾಗೂ ಅದಕ್ಕೆ ತಗುಲಿದ ವೆಚ್ಚ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)?